# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.1293–2021** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರಾಮು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 22–07–2024.** |

**ಪಾಟೀ ಸವಾಲುಃ ಶ್ರೀ ಕೆ.ಎಸ್.ಎಸ್ ವಕೀಲರಿಂದಃ**

ನಾನು ಎಸ್.ಐ.ಪಿ.ಎಂ ಕಾರ್ಖಾನೆಯ ನಿವೃತ್ತ ನೌಕರ. ನಾನು ನಿವೃತ್ತಿ ಹೊಂದಿ ಸುಮಾರು 12 ವರ್ಷಗಳಾಗುತ್ತವೆ. ನಾನು 2012 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಿವೃತ್ತಿ ನಂತರವೂ ಕಾರ್ಖಾನೆಯವರು 2 ವರ್ಷಗಳ ಕಾಲ ಉದ್ಯೋಗಕ್ಕೆ ಅವಕಾಶ ನೀಡಿದ್ದು, ಆನಂತರ ನಾನು ಮನೆಯಲ್ಲಿ ಇರುತ್ತೇನೆ. ನನಗೆ ಬರಬೇಕಾದ ಸೌಲಭ್ಯಗಳು 2012 ರಲ್ಲಿ ಬಂದಿರುತ್ತದೆ ಎಂದರೆ ಸರಿ. ನನಗೆ ತಿಂಗಳಿಗೆ ರೂ.2015/– ಗಳ ನಿವೃತ್ತಿ ವೇತನ ಬರುತ್ತದೆ. ನಾನು ಹಣವನ್ನು ಬ್ಯಾಂಕ್, ಅಂಚೇ ಕಚೇರಿ ಮತ್ತು ಜೀವವಿಮಾ ನಿಗಮದಲ್ಲಿ ಠೇವಣಿ ಮಾಡಿದ್ದು ಅದರಿಂದ ನನಗೆ ಸುಮಾರು ತಿಂಗಳಿಗೆ ರೂ.10,000/– ಗಳಷ್ಟು ಹಣ ಬರುತ್ತದೆ. ನಾವು ಮನೆಯಲ್ಲಿ ನಾನು ನನ್ನ ಮತ್ತು ಹೆಂಡತಿ ಇರುತ್ತೇವೆ. ನನ್ನ ಪತ್ನಿ ಗೃಹಿಣಿ. ನನಗೆ ಬರುವ ರೂ.10,000/– ಗಳ ಆದಾಯದಲ್ಲಿ ನಾನು ನನ್ನ ಜೀವನವನ್ನು ಸಾಗಿಸಬೇಕು ಎಂದರೆ ಸರಿ. ಆರೋಪಿ ಮತ್ತು ಅವರ ಪತಿ ನನ್ನ ಪತ್ನಿಯ ಸಹೋದರಿಯ ಪತಿಯ ಮುಖೇನೆ ನನಗೆ ಪರಿಚಯವಾಗಿರುತ್ತಾರೆ. ನನ್ನ ಪತ್ನಿಯ ಸಹೋದರಿಯ ಪತಿಯ ಹೆಸರು ಡಿ.ಕೆ.ರಾಮಕೃಷ್ಣ. ನನಗೂ ಮತ್ತು ಆರೋಪಿಯ ಪತಿಯ ನಡುವೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿಯಲ್ಲ.

ಡಿ.ಕೆ.ರಾಮಕೃಷ್ಣ ಮತ್ತು ಆರೋಪಿಯ ಪತಿ ನಡುವೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾತುಕಗಳು ಆಗುತ್ತಿತ್ತು ಎಂದರೆ ಸರಿಯಲ್ಲ. ಹಣಕಾಸಿನ ವ್ಯವಹಾರವು ರಾಮಕೃಷ್ಣ ರವರ ಮನೆಯಲ್ಲಿ ನಡೆದಿದ್ದು, ಆ ಸಮಯ ಆರೋಪಿ ಮತ್ತು ಆಕೆಯ ಸಹೋದರಿ ಇದ್ದು, ಆದರೆ ಆರೋಪಿಯ ಪತಿ ಇರಲಿಲ್ಲ. ನಾನು ಹಣಕಾಸಿನ ವ್ಯವಹಾರವನ್ನು ರಾಮಕೃಷ್ಣ ರವರ ಮುಖೇನ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ನನಗೆ ಪರಿಚಯವಿಲ್ಲದೇ ಇದ್ದ ಕಾರಣ ಅವರ ಮುಖೇನ ವ್ಯವಹಾರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

2. ಆರೋಪಿ ಪತಿ ಮತ್ತು ನನ್ನ ಪತ್ನಿಯ ಸಹೋದರಿಯ ಗಂಡ ರಾಮಕೃಷ್ಣ ರವರ ನಡುವೆ ಸ್ನೇಹ ಇರುತ್ತದೆ ಎಂದರೆ ಸರಿ. ಈ ಪ್ರಕರಣದ ಹಣಕಾಸಿನ ವ್ಯವಹಾರದಲ್ಲಿ ಯಾವುದೇ ರೀತಿಯಲ್ಲಿಯೂ ಭಾಗಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಕುಟುಂಬದ ವಿಚಾರ ರಾಮಕೃಷ್ಣ ರವರಿಗೆ ಗೊತ್ತು ಎಂದರೆ ಸರಿ. ಆರೋಪಿ 2016 ಮತ್ತು 2019 ರಲ್ಲಿ ನನ್ನಿಂದ ಸಾಲವಾಗಿ ಹಣ ಪಡೆದು ಹಿಂದಿರುಗಿಸಿರುತ್ತಾರೆ. ಆರೋಪಿ ಈ ಹಿಂದೆ ಸಾಲವಾಗಿ ಪಡೆದಿದ್ದ ಸಮಯ ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ಬರೆದುಕೊಟ್ಟಿದ್ದರು. ಸದರಿ ಹಣಕಾಸಿನ ವ್ಯವಹಾರವು ರಾಮಕೃಷ್ಣ ರವರ ಮುಖೇನ ಆಗಿತ್ತು ಎಂದರೆ ಸರಿ. ನಾನು ನೇರವಾಗಿ ಆರೋಪಿಗೆ ಹಣ ನೀಡಿರುವುದಿಲ್ಲ, ರಾಮಕೃಷ್ಣ ರವರ ಮುಖೇನ ತಲುಪಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಈ ಹಿಂದೆ ನನ್ನಿಂದ ಸಾಲ ಪಡೆದು ಹಿಂದಿರುಗಿಸಿದ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಬಳಿ ಕೇವಲ ಪೋಟೋ ಪ್ರತಿಗಳು ಇರುತ್ತವೆ ಎಂದು ನುಡಿಯುತ್ತಾರೆ.

3. ನಾನು ಆರೋಪಿಗೆ ದಿ.21-12-2019 ರಂದು ಹಣವನ್ನು ನಗದಾಗಿ ನೀಡಿರುತ್ತೇನೆ. ನಾನು ಆರೋಪಿಗೆ ರೂ.500/- ಮುಖ ಬೆಲೆಯ

ನೋಟುಗಳನ್ನು ನೀಡಿರುತ್ತೇನೆ. ನನಗೆ ಬಾಡಿಗೆ, ನಿವೃತ್ತಿ ವೇತನ, ವ್ಯವಸಾಯದಿಂದ ಮತ್ತು ನಾನು ಬ್ಯಾಂಕ್ ಮತ್ತು ಇತರೆ ಕಡೆ ಠೇವಣಿ ಇಟ್ಟಿರುವ ಹಣದಿಂದ ಬರುವ ಆದಾಯದಿಂದ ಆರೋಪಿಗೆ ಸಾಲವಾಗಿ ಹಣ ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಕೆಲವೊಮ್ಮೆ ನನ್ನ ಮಕ್ಕಳು ಸಹ ಹಣ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನನಗೆ ವ್ಯವಸಾಯದಿಂದ ವರ್ಷ ಒಂದಕ್ಕೆ ರೂ.1,00,000/- ಆದಾಯ ಸಿಗುತ್ತದೆ. ನನಗೆ ವ್ಯವಸಾಯದಿಂದ ರೂ.1,00,000/-ಆದಾಯ ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ, ಆ ರೀತಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಜಮೀನಿನಲ್ಲಿ ಕಬ್ಬು ಮತ್ತು ಭತ್ತವನ್ನು ಬೆಳೆಯುತ್ತೇನೆ. ನನಗೆ ಒಂದುಕಾಲು ಎಕರೆ ವ್ಯವಸಾಯ ಜಮೀನು ಇದ್ದು, ಕೆಲವೊಂದು ಜಮೀನುಗಳನ್ನು ಗುತ್ತಿಗೆ ಆಧಾರದ ಮೇರೆಗೆ ಕೆಲಸ ಮಾಡುತ್ತೇನೆ. ನನಗೆ ಒಂದಕಾಲು ಎಕರೆ ಜಮೀನಿನಿಂದ ರೂ.1,00,000/- ಆದಾಯ ಇರುವುದಿಲ್ಲ, ವರ್ಷವೊಂದಕ್ಕೆ ಸುಮಾರು ರೂ.25,000/- ಅದಾಯ ಇರಬಹುದು ಎಂದರೆ ಸರಿಯಲ್ಲ. ನನಗೆ ತಿಂಗಳೊಂದಕ್ಕೆ ರೂ.10,000/- ಬಾಡಿಗೆ ಬರುತ್ತದೆ. ನನ್ನ ಪತ್ನಿ ಮತ್ತು ನನ್ನ ಔಷದಿಯ ವೆಚ್ಚವನ್ನು ನನ್ನ ಮಕ್ಕು ಭರಿಸುತ್ತಾರೆ. ಆರೋಪಿಯ ಕೋರಿಕೆಯ ಮೇರೆಗೆ ನಾನು ಆರೋಪಿಗೆ ರೂ.3,70,000/- ಗಳನ್ನು ನಗದಾಗಿ ನೀಡಿರುತ್ತೇನೆ. ನಾನು ಆರೋಪಿಗೆ ರೂ.3,70,000/- ಗಳನ್ನು ಸಾಲವಾಗಿ ನೀಡಿರುವುದಿಲ್ಲ, ಆರೋಪಿ ಗಂಡ ನಾರಾಯಣ ಮತ್ತು ರಾಮಕೃಷ್ಣ ರವರು ಸೇರಿ ನನ್ನ ಮುಖೇನ ಈ ಪ್ರಕರಣವನ್ನು ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

4. 2019 ರಲ್ಲಿ ಕೋವಿಡ್ ಸಾಂಕ್ರಾಮಿಕ ಕಾಯಿಲೆ ಇದ್ದ ಕಾರಣ ಹಣವನ್ನು ಬ್ಯಾಂಕಿನ ಮುಖೇನ ಮಾಡಬೇಕಿದ್ದು, ನೇರ-ನೇರವಾಗಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ನೀಡಿದ ಚೆಕ್ಕನ್ನು

ದಿ.09/03/2021 ರಂದು ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರು ಪಡಿಸಿರುತ್ತೇನೆ. ಬ್ಯಾಂಕಿನವರು ಹಣ ಇಲ್ಲ ಎಂದು ನನಗೆ ಹಿಂಬರಹವನ್ನು ನೀಡಿರುತ್ತಾರೆ. ನಾನು ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿನ ಸಹಿ ಆರೋಪಿಯದ್ದಲ್ಲ ಸದರಿ ಸಹಿಯನ್ನು ಆರೋಪಿಯ ಪತಿ ನಾರಾಯಣ ಮತ್ತು ರಾಮಕೃಷ್ಣ ರವರು ಸೇರಿ ಫೋರ್ಜರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ಆರೋಪಿ ಅವರ ಪತಿಯವರ ವಿರುದ್ಧ ಎಸ್.ಪಿ ರವರಿಗೆ ಮತ್ತು ಬ್ಯಾಂಕಿನವರಿಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿನ ಒಕ್ಕಣೆ ಮತ್ತು ಸಹಿಯಲ್ಲಿರುವ ಶಾಹಿಗಳು ಬೇರೆ ಬೇರೆಯಾಗಿದ್ದು, ಒಕ್ಕಣೆಯನ್ನು ನಾನು ಬರೆದು ಈ ಪ್ರಕರಣವನ್ನು ಆರೋಪಿ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ಸಹಿಯನ್ನು ಫೋರ್ಜರಿ ಮಾಡಿ ಈ ಪ್ರಕರಣವನ್ನು ದಾಖಲಿಸಿರುವುದರಿಂದ ಈ ಪ್ರಕರಣವು ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವ ಕಾನೂನಿನ ಅವಶ್ಯಕತೆಗೋಸ್ಕರ ಸಾಲವನ್ನು ಪಡೆದಿದ್ದಾರೆ ಎಂದು ನನ್ನ ನೋಟಿಸಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ಆರೋಪಿಗೂ ಯಾವುದೇ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಗೆ ರೂ.3,70,000/– ಗಳನ್ನು ಸಾಲವಾಗಿ ನೀಡುವಷ್ಟು ಅರ್ಥಿಕ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಸರ್ಕಾರಿ ನೌಕರಳಾದ್ದರಿಂದ ಅವರಿಂದ ಹೇಗಾದರೂ ಮಾಡಿ ಹಣ ವಸೂಲಿ ಮಾಡಬಹುದು ಎಂಬ ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ ಲಕ್ಷಾಂತರ ರೂಪಾಯಿಗಳ ಹಣ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುವುದರಿಂದ ನಾನು ಪಿರ್ಯಾದಿನಲ್ಲಿ ಕೋರಿರುವಂತೆ ಹಣವನ್ನು ಮರುಪಾವತಿ ಮಾಡಲು ಆರೋಪಿ ಭಾಧ್ಯಸ್ಥಳಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ–1 ಮತ್ತು ಆರೋಪಿಯ

ವಕಾಲತ್ ನಾಮೆಯಲ್ಲಿನ ಸಹಿಯನ್ನು ತೋರಿಸಿ ನಿಪಿ–1 ಮತ್ತು ವಕಾಲತ್ ನಲ್ಲಿ ಇರುವ ಸಹಿಗಳ ನಡುವೆ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆಯದೇ ಇದ್ದರೂ ಸಹ ಆರೋಪಿ ಪತಿ ಮತ್ತು ರಾಮಕೃಷ್ಣ ರವರ ಕೋರಿಕೆ ಮೇರೆಗೆ ಆರೋಪಿ ವಿರುದ್ಧ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**